(10)

**ವಿಧಾನ ಪರಿಷತ್ ಮಾನ್ಯ ಸದಸ್ಯರುಗಳಾದ ಶ್ರೀ ತಿಪ್ಪಣ್ಣ ಕಮಕನೂರ, ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ, ಶ್ರೀ ಎನ್.ರವಿಕುಮಾರ್ ಹಾಗೂ ಶ್ರೀ ಶಶಿಲ್ ಜಿ.ನಮೋಶಿ ರವರುಗಳು**

**<u>ನಿಯಮ–330 ರಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ</u>**

**ಪ್ರಶ್ನೆ:** **ದಿನಾಂಕ:15.06.2023 ರಂದು ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ನಾರಾಯಣಪುರ ಗ್ರಾಮದಲ್ಲಿ ಶ್ರೀ ಸಾಯಬಣ್ಣ ತಂದೆ ರೇವಣಸಿದ್ದಪ್ಪ ಕರ್ಜಗಿ ಎಂಬ ರೈತನು ಟ್ರ್ಯಾಕ್ಟರ್ ಮೂಲಕ ಮರಳು ಸಾಗಿಸುತ್ತಿದ್ದಾಗ ಇವರನ್ನು ತಡೆಯಲು ಬಂದ ಹೆಡ್ ಕಾನ್ಸ್‌ಟೇಬಲ್‌ರಾದ ಶ್ರೀ ಮಯೂರ್ ಚವ್ಹಾಣ್ ರವರು ಏಕಾಚಿತ್ತಾಗಿ ಟ್ರ್ಯಾಕ್ಟರ್‌ಗೆ ಅಡ್ಡ ಬಂದ ಕಾರಣದಿಂದಾಗಿ ಅಪಘಾತವಾಗಿ ಸಾವು ಸಂಭವಿಸಿದ ಪ್ರಕರಣದಲ್ಲಿ ದಿನಾಂಕ:17.06.2023 ರಂದು ಟ್ರ್ಯಾಕ್ಟರ್ ಮಾಲೀಕನಾದ ಸಾಯಬಣ್ಣ ತಂದೆ ರೇವಣಸಿದ್ದಪ್ಪ ಕರ್ಜಗಿ ಇವರನ್ನು ಪೊಲೀಸರು ಬಂಧಿಸಿ ಕಾಲಿಗೆ ಶೂಟ್‌ಔಟ್ ಮಾಡಿದ ಘಟನೆಯ ಬಗ್ಗೆ.**

**ಉತ್ತರ:** ನೆಲೋಗಿ ಪೊಲೀಸ್ ಠಾಣಾ ವ್ಯಾಪ್ತಿಯ ನಾರಾಯಣಪುರ ಮತ್ತು ಹುಲ್ಲೂರ ಗ್ರಾಮಗಳ ಹತ್ತಿರ ಪ್ರತಿ ದಿನ ಅಕ್ರಮ ಮರಳು ಸಾಗಿಸುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಇದ್ದುದ್ದರಿಂದ ಪಿ.ಎಸ್.ಐ. ನೆಲೋಗಿರವರು ದಿನಾಂಕ:12.06.2023 ರಿಂದ ಪ್ರತಿ ದಿವಸ ಸದರಿ ಗ್ರಾಮಗಳ ಮರಳು ಟೆಂಡರ್ ಪಾಯಿಂಟ್ ಹತ್ತಿರ ಪೊಲೀಸ್ ಪಿಕೇಟಿಂಗಿಗೆ ನೆಲೋಗಿ ಪೊಲೀಸ್ ಠಾಣೆಯ ಮಯೂರ @ ಮೈಸೂರ ಹೆಚ್.ಸಿ. 33 ಮತ್ತು ಪ್ರಮೋದ ಪಿ.ಸಿ. 183 ರವರುಗಳಿಗೆ ಪಿಕೇಟಿಂಗ್ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಅದರಂತೆ ದಿನಾಂಕ:15.06.2023 ರಂದು ಸದರಿ ಮೇಲ್ಕಂಡ ಸಿಬ್ಬಂದಿಯವರು ರಾತ್ರಿ 10.20 ಗಂಟೆಗೆ ಪಿಕೇಟಿಂಗ್ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹುಲ್ಲೂರ ಗ್ರಾಮದ ಮರಳು ಟೆಂಡರ್ ಪಾಯಿಂಟ್ (ಡಕ್ಕಾ) ದಿಂದ ಒಂದು ಟ್ರ್ಯಾಕ್ಟರದಲ್ಲಿ ಕಳ್ಳತನದಿಂದ ಅಕ್ರಮವಾಗಿ ಮರಳು ತುಂಬಿಕೊಂಡು ನಾರಾಯಣಪುರ ಗ್ರಾಮದ ಕಡೆಗೆ ಹೋಗುತ್ತಿದ್ದ ಬಗ್ಗೆ ಮಾಹಿತಿ ಬಂದ ಮೇರೆಗೆ ಸದರಿ ಸಿಬ್ಬಂದಿಯವರು ತಮ್ಮ ಮೋಟಾರ್ ಸೈಕಲ್ ಮೇಲೆ ನಾರಾಯಣಪುರ ಗ್ರಾಮದ ಸಮೀಪ ಹೋದಾಗ 10.45 ಗಂಟೆ ಸುಮಾರಿಗೆ ಎದುರುಗಡೆಯಿಂದ ಮರಳು ತುಂಬಿದ ಟ್ರ್ಯಾಕ್ಟರ್ ಬಂದಿದ್ದು, ಸದರಿ ಸಿಬ್ಬಂದಿಯವರು ಟ್ರ್ಯಾಕ್ಟರ್ ಚಾಲಕನಿಗೆ ಕೈ ಸನ್ನೆ ಮಾಡಿ ಟ್ರ್ಯಾಕ್ಟರ್ ನಿಲ್ಲಿಸಲು ತಿಳಿಸಿದಾಗ ಟ್ರ್ಯಾಕ್ಟರ್ ಚಾಲಕನು ಟ್ರ್ಯಾಕ್ಟರನ್ನು ನಿಲ್ಲಿಸಿದಾಗ ಸದರಿ ಸಿಬ್ಬಂದಿಯವರಿಗೆ ಪರಿಚಯ ಇರುವ ಸಿದ್ದಪ್ಪ ತಂದೆ ರೇವಣಸಿದ್ದಪ್ಪ ಕರಜಗಿ ಹಾಗೂ ಅವನ ಪಕ್ಕದಲ್ಲಿ ಸಾಯಬಣ್ಣ ತಂದೆ ರೇವಣಸಿದ್ದಪ್ಪ ಕರಜಗಿ ಇಬ್ಬರೂ ಸಿಬ್ಬಂದಿಯವರಿಗೆ ಏ ರಂಡಿ ಮಕ್ಕಳೆ ಪೊಲೀಸರೆ ನಿಮ್ಮದು ಬಹಳ ಆಗ್ಯಾದ ನಾವು ಟೆಂಡರ್ ಪಾಯಿಂಟನಿಂದ ಮರಳು ಹೊಡೆಯುತ್ತೇವೆ ನೀವು ಏನಾದರು ಅಡ್ಡ ಬಂದರೆ ನಿಮ್ಮ ಮೇಲೆ ಟ್ರ್ಯಾಕ್ಟರ್ ಹಾಯಿಸಿ ಕೊಲೆ ಮಾಡಿ ಮರಳು ತೆಗೆದುಕೊಂಡು ಹೋಗುತ್ತೇವೆ ಎಂದು ಅಲ್ಲಿ ಕರ್ತವ್ಯದ ಮೇಲಿದ್ದ ಮಯೂರ @ ಮೈಸೂರ ಹೆಚ್.ಸಿ. 33 ಮತ್ತು ಪ್ರಮೋದ ಪಿ.ಸಿ. 183 ಇಬ್ಬರಿಗೂ ಕೊಲೆ ಮಾಡುವ ಉದ್ದೇಶದಿಂದ ತಮ್ಮ ಟ್ರ್ಯಾಕ್ಟರನ್ನು ಜೋರಾಗಿ ಚಲಾಯಿಸಿ ಮೋಟಾರ್ ಸೈಕಲ್ ಮೇಲೆ ಹಾಯಿಸಿದ್ದರಿಂದ ಮೋಟಾರ್ ಸೈಕಲ್ ಹಿಂದೆ ಕುಳಿತ ಪ್ರಮೋದ ಪಿ.ಸಿ. ಇವರು ರೋಡಿನ ಪಕ್ಕ ತೆಗ್ಗಿನಲ್ಲಿ ಬಿದ್ದು ಭಾರಿ ಗಾಯವಾಗಿದ್ದು ಮತ್ತು ಮೋಟಾರ್ ಸೈಕಲ್ ಚಲಾಯಿಸುತ್ತಿದ್ದ ಮಯೂರ @ ಮೈಸೂರ ಹೆಚ್.ಸಿ. 33 ಇವರು ಸೈಕಲ್ ಮೋಟಾರ್ ಸಮೇತ ಟ್ರ್ಯಾಕ್ಟರ ಟ್ರಾಲಿಯ ಗಾಲಿಯಲ್ಲಿ ಬಿದ್ದಾಗ ಟ್ರ್ಯಾಕ್ಟರ್ ಚಾಲಕನು ತನ್ನ ಟ್ರ್ಯಾಕ್ಟರನ್ನು ಮಯೂರ @ ಮೈಸೂರ ಹೆಚ್.ಸಿ. 33 ಇವರ ಎದೆ ಮತ್ತು ತಲೆಯ ಮೇಲೆ ಹಾಯಿಸಿ ಕೊಲೆ ಮಾಡಿ ಟ್ರ್ಯಾಕ್ಟರ್ ಇಂಜಿನ್ ತೆಗೆದುಕೊಂಡು ಓಡಿ ಹೋಗಿದ್ದು ಈ ವಿಷಯದಲ್ಲಿ ನೆಲೋಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 69/23 ಕಲಂ 333, 379, 307, 302, 504, 506 ಸಂ 34 ಐ.ಪಿ.ಸಿ. ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಸದರಿ ಪ್ರಕರಣದಲ್ಲಿ ತನಿಖೆ ಮಾಡಲು ಡಿ.ಎಸ್.ಪಿ., ಡಿ.ಸಿ.ಆರ್.ಬಿ. ರವರ ನೇತೃತ್ವದಲ್ಲಿ 3–4 ವಿಶೇಷ ತಂಡಗಳನ್ನು ರಚಿಸಿ ಅದರಲ್ಲಿ ಶ್ರೀ ಬಸವರಾಜ ಚಿತ್ತಕೋಟಿ ಪಿ.ಎಸ್.ಐ. ಯಡ್ರಾಮಿ, ಶ್ರೀ ಸಂಗಮೇಶ ಪಿ.ಎಸ್.ಐ. ಜೇವರಗಿ ಠಾಣೆ ಮತ್ತು ಸಿಬ್ಬಂದಿಯವರ ತಂಡವನ್ನು ಕಳುಹಿಸಿದ್ದು, ಸದರಿ ಅಧಿಕಾರಿಗಳು ಆರೋಪಿತರ ಪತ್ತೆ ಕಾರ್ಯದಲ್ಲಿದ್ದಾಗ ಆರೋಪಿ ಸಾಯಬಣ್ಣ ತಂದೆ ರೇವಣಸಿದ್ದಪ್ಪ ಕರಜಗಿ ಈತನು ವಿಜಯಪುರ ಜಿಲ್ಲೆಯ ಆಲಮೇಲ ಪಟ್ಟಣದ ಹೊರವಲಯದಲ್ಲಿ ಇದ್ದ ಬಗ್ಗೆ ಮಾಹಿತಿ ತಿಳಿದು, ಅಲ್ಲಿಗೆ ಹೋಗಿ ಆತನನ್ನು ವಶಕ್ಕೆ ಪಡೆದು ಸದರಿ ಆರೋಪಿತನನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಲು ಸರಕಾರಿ ಜೀಪಿನಲ್ಲಿ ಮಂದೇವಾಲ ಗ್ರಾಮದ ಹತ್ತಿರ ಬರುತ್ತಿದ್ದಾಗ ಆರೋಪಿ ಸಾಯಬಣ್ಣನು ಮೂತ್ರ ವಿಸರ್ಜನೆಗೆ ಹೋಗುವುದಾಗಿ ತಿಳಿಸಿದಾಗ ಮಂದೇವಾಲ ಗ್ರಾಮದ ಹೊಲಗಳಿಗೆ ಹೋಗುವ ರಸ್ತೆಗಳ ಹತ್ತಿರ ವಾಹನ ನಿಲ್ಲಿಸಿ ಆತನನ್ನು ಮೂತ್ರ ವಿಸರ್ಜನೆಗೆ ಇಳಿದಾಗ ಒಮ್ಮೇಲೆ ಚಾಕು ತೆಗೆದು ಬೆಂಗಾವಲಿಗೆ ಇದ್ದ ಬಸವರಾಜ ಪಿ.ಎಸ್.ಐ. ಯಡ್ರಾಮಿರವರಿಗೆ ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಲು ಬಂದಾಗ ಅವರು ಕೈ ಅಡ್ಡ ಹಿಡಿದಿದ್ದರಿಂದ ಸದರಿ ಪಿ.ಎಸ್.ಐ.ರವರಿಗೆ ಎಡಗೈ ಮತ್ತು ಹೊಟ್ಟೆಗೆ ರಕ್ತಗಾಯವಾಗಿದ್ದು, ಆಗ ಬೆಂಗಾವಲಿಗೆ ಇದ್ದ ಇನ್ನೊಬ್ಬ ಪಿ.ಎಸ್.ಐ. ಶ್ರೀ ಸಂಗಮೇಶ ಅಂಗಡಿರವರು ಆರೋಪಿ ಸಾಯಬಣ್ಣನಿಗೆ ಚಾಕು ಬಿಸಾಕು ಅಂತ ಹೇಳಿದಾಗ ಅವನು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಚಾಕು ಹಿಡಿದುಕೊಂಡು ಮೈಮೇಲೆ ಬಂದು ಓಡಿ ಹೋಗಲು ಪ್ರಯತ್ನಿಸಿದಾಗ ಶ್ರೀ ಸಂಗಮೇಶ ಪಿ.ಎಸ್.ಐ.ರವರು ನಿಲ್ಲುವಂತೆ ಎಚ್ಚರಿಕೆ ನೀಡಿದರು ಸಹ ಕೇಳದೆ ಇದ್ದಾಗ ಪಿ.ಎಸ್.ಐ.ರವರು ಗಾಳಿಯಲ್ಲಿ ಗುಂಡು ಹಾರಿಸಿದ್ದು ಆದರು ಕೂಡಾ ಮತ್ತೆ ಹಲ್ಲೆ ಮಾಡಿ ಓಡಿ ಹೋಗಲು ಪ್ರಯತ್ನಿಸಿದಾಗ ಸದರಿ ಪಿ.ಎಸ್.ಐ.ರವರು ತಮ್ಮ ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದಾಗ ಗುಂಡು ಆರೋಪಿತನ ಬಲಗಾಲಿಗೆ ಬಿದ್ದಿರುತ್ತದೆ. ನಂತರ ಆತನನ್ನು ವಶಕ್ಕೆ ಪಡೆದುಕೊಂಡು, ಆರೋಪಿಯನ್ನು ಮತ್ತು ಆರೋಪಿಯಿಂದ ಗಾಯಗೊಂಡಿದ್ದ ಬಸವರಾಜ ಚಿತ್ತಕೋಟಿ ಪಿ.ಎಸ್.ಐ.ರವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿರುತ್ತದೆ. ಈ ಬಗ್ಗೆ ನೆಲೋಗಿ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:70/23 ಕಲಂ 353, 307, 504, 332, 333, 224, ಐ.ಪಿ.ಸಿ. ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದ ತನಿಖೆಯನ್ನು ಪಿ.ಎಸ್.ವನಂಜಕರ್ ಪಿ.ಐ. ಸಿ.ಇ.ಎನ್. ಠಾಣೆ ಕಲಬುರಗಿ ಪ್ರಭಾರ ಜೇವರಗಿ ವೃತ್ತ ರವರಿಗೆ ವಹಿಸಿದ್ದು, ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.

ಈ ಪ್ರಕರಣದ ಆರೋಪಿಯು ಹಲವಾರು ಪ್ರಕರಣಗಳಲ್ಲಿ ಭಾಗಿಯಾಗಿದ್ದು, ಈತನ ವಿರುದ್ದ ದಿನಾಂಕ:20.06.2017 ರಂದು ನೆಲೋಗಿ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟ್ ತೆರೆಯಲಾಗಿದ್ದು, ಪ್ರಸ್ತುತ ರೌಡಿ ಶೀಟರ್ ಆಗಿರುತ್ತಾನೆ. ಈತನ ವಿರುದ್ಧ ಈ ಕೆಳಕಂಡ ಪ್ರಕರಣಗಳು ದಾಖಲಾಗಿರುತ್ತವೆ.

1) ನೆಲೋಗಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 127/12 ಕಲಂ 143, 147, 148, 323, 324, 308, 504, 506 ಜೊತೆಗೆ 149 ಐ.ಪಿ.ಸಿ.
2) ನೆಲೋಗಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 64/16 ಕಲಂ 143, 147, 148, 323, 324, 307, 504, 506 ಜೊತೆಗೆ 149 ಐ.ಪಿ.ಸಿ.
3) ನೆಲೋಗಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 81/17 ಕಲಂ 395 ಐ.ಪಿ.ಸಿ.
4) ನೆಲೋಗಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ 69/23 ಕಲಂ 333, 379, 307, 302, 504, 506 ಸಂ 34 ಐ.ಪಿ.ಸಿ. & ಕಲಂ 3 (1) (ಆರ್) (ಎಸ್) 2 (5) ಎಸ್.ಸಿ./ಎಸ್.ಟಿ ಪಿ.ಎ. ಆಕ್ಟ್,

5) ನೆಲೋಗಿ ಠಾಣೆ ಪ್ರಕರಣ ಸಂಖ್ಯೆ 70/23 ಕಲಂ 353, 307, 504, 332, 333, 224, ಐ.ಪಿ.ಸಿ

ಈ ಘಟನೆಯ ಆರೋಪಿ ಸಾಯಬಣ್ಣನು ಚಾಕುವಿನಿಂದ ಕರ್ತವ್ಯದ ಮೇಲಿದ್ದ ಪೊಲೀಸ್ ಅಧಿಕಾರಿ ಮೇಲೆ ತೀವ್ರ ತರಹದ ಹಲ್ಲೆ ಮಾಡಿ ವಿಧಿಬದ್ದ ಬಂಧನದಿಂದ ಓಡಿ ಹೋಗಲು ಪ್ರಯತ್ನಿಸಿದ್ದು, ಆಗ ಪೊಲೀಸ್ ಅಧಿಕಾರಿಗಳು ನೀಡಿದ ಸೂಚನೆಗಳನ್ನು ಧಿಕ್ಕರಿಸಿ ಮತ್ತೆ ಹಲ್ಲೆ ಮಾಡಿದಾಗ ಆತ್ಮ ರಕ್ಷಣೆಗಾಗಿ ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದರೂ ಸಹಾ, ಮತ್ತೆ ಹಲ್ಲೆ ಮಾಡಿ ಓಡಿ ಹೋಗಲು ಪ್ರಯತ್ನಿಸಿದಾಗ ಕಾಲಿಗೆ ಗುಂಡು ಹಾರಿಸಿ ವಶಕ್ಕೆ ಪಡೆದುಕೊಳ್ಳಲಾಗಿದೆ.

---

**ಹೆಚ್‌ಡಿ** 352 ಎಸ್‌ಎಸ್‌ಟಿ 2023

(ಡಾ: ಜಿ.ಪರಮೇಶ್ವರ)
ಗೃಹಸಚಿವರು